# ಕರ್ನಾಟಕ ಲೋಕಾಯುಕ್ತ

DRE-2

ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಬಿಡಿ.451/2009/ಸನಿಕಾಸ-2

ಬಹುಮಹಡಿಗಳ ಕಟ್ಟಡ,
ಡಾ||ಬಿ.ಆರ್.ಅಂಭೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ:3.7.2017.

## ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(1)ರ ಅನ್ವಯ ವರದಿ

ವಿಷಯ:- ತುರುವೇಕೆರೆ ತಾಲ್ಲೂಕು ಮಣೆಚೆಂಡೂರು ಗ್ರಾಮದ ಶ್ರೀಮತಿ ಕೆಂಪಮ್ಮ ಕೋಂ.ವೆಂಕಟಯ್ಯನರು ಗಂಗಾ ಕಲ್ಯಾಣ ಯೋಜನೆಯ ಫಲಾನುಭವಿಯಾಗಿದ್ದು ಅವರಿಗೆ ಕೊಳವೆಬಾವಿ ಕೊರೆಸಲು ಮಂಜೂರಾದ ರೂ.86,000/-ಗಳು ಹಾಗೂ ಹಣ ಮಂಜೂರಾದ ದಿನಾಂಕದಿಂದ ಹಣ ವಸೂಲಾಗುವವರೆಗೆ ಶೇ.6ರ ಬಡ್ಡಿದರದಲ್ಲಿ ವಸೂಲು ಮಾಡಿಕೊಂಡು ಸರ್ಕಾರಕ್ಕೆ ಭರಿಸಲು ಸೂಕ್ತ ಕ್ರಮಕೈಗೊಳ್ಳುವಂತೆ ಸಂಬಂಧಪಟ್ಟವರಿಗೆ ನಿರ್ದೇಶನ ನೀಡುವ ಬಗ್ಗೆ.

-----

ಶ್ರೀ ಎಂ.ಜಿ.ಮುರಳಿ ಮೋಹನ್, ಮಣೆಚಂಡೂರು ಗ್ರಾಮ, ತುರುವೇಕೆರೆ ತಾಲ್ಲೂಕು, (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ (1) ಮ್ಯಾನೇಜಿಂಗ್ ಡೈರೆಕ್ಟರ್, ಡಾ.ದೇವರಾಜ್ ಅರಸ್ ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ, ತುಮಕೂರು, (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಳ್ಳಲಾಗಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:-**

ದೂರುದಾರರು ತಮ್ಮ ದೂರಿನಲ್ಲಿ ತುರುವೇಕೆರೆ ತಾಲ್ಲೂಕು ಮಣೆಚೆಂಡೂರು ಗ್ರಾಮದ ಶ್ರೀಮತಿ ಕೆಂಪಮ್ಮ ಕೋಂ.ವೆಂಕಟಯ್ಯನರು ಸಣ್ಣ ಹಿಡುವಳಿದಾರರೆಂದು 3.27 ಎಕರೆ ಜಮೀನನ್ನು ಮಾತ್ರ ಹೊಂದಿದ್ದಾಗಿ ಸುಳ್ಳು ಮಾಹಿತಿ ನೀಡಿ ಗಂಗಾಕಲ್ಯಾಣ ಯೋಜನೆಯಡಿ ಜಮೀನಿಗೆ ಕೊಳವೆಬಾವಿ ಕೊರೆಸಿ ವಿದ್ಯುತ್ ಸಂಪರ್ಕ ಪಡೆದು, ಸರ್ಕಾರಕ್ಕೆ ವಂಚಿಸಿರುತ್ತಾರೆ. ಆದರೆ ಶ್ರೀಮತಿ ಕೆಂಪಮ್ಮ ಅವರು 8.21 ಎಕರೆ ಜಮೀನು ಹೊಂದಿದ್ದು, ದೊಡ್ಡ ಹಿಡುವಳಿದಾರರಾಗಿರುತ್ತಾರೆ. ಎದುರುದಾರರು ಈ ಬಗ್ಗೆ ಪರಿಶೀಲಿಸದೆ, ಕೊಳವೆ ಬಾವಿ ಮಂಜೂರು

ಮಾಡಿ ಕರ್ತವ್ಯಲೋಪವೆಸಗಿರುವುದರಿಂದ ಎದುರುದಾರರ ವಿರುದ್ಧ ಕ್ರಮಕೈಗೊಳ್ಳಬೇಕೆಂದು ಸರ್ಕಾರದ ಹಣ ದುರುಪಯೋಗವಾಗದಂತೆ ತಡೆಯಬೇಕೆಂದು ದೂರು ಸಲ್ಲಿಸಿದ್ದಾರೆ.

3. ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ಮಾನ್ಯ ತಹಶೀಲ್ದಾರ್, ತುರುವೇಕೆರೆ ಅವರು ಶ್ರೀಮತಿ ಕೆಂಪಮ್ಮ ಅವರು ನೀಡಿದ ಸಣ್ಣ ಹಿಡುವಳಿದಾರರ ಪ್ರಮಾಣಪತ್ರದ ಮೇಲೆ ಅವರಿಗೆ ಕೊಳವೆ ಬಾವಿ ತೋಡಿಸಲು ರೂ. 86,000/- ಮಂಜೂರಾಗಿದ್ದು, ಅವರ ಜಮೀನಿನಲ್ಲಿ ಕೊಳವೆ ಬಾವಿ ತೋಡಿಸಿ ವಿದ್ಯುತ್ ಸಂಪರ್ಕ ನೀಡಿ ಉಳಿದ ಮೊತ್ತಕ್ಕೆ ಲಭ್ಯವಾಗುವ ಸಾಮಗ್ರಿಗಳನ್ನು ನಿಯೋಜಿತ ಕಂಪನಿಯಿಂದ ಸರಬರಾಜು ಮಾಡಲಾಗಿರುತ್ತದೆ. ಆದ್ದರಿಂದ ಸದರಿ ಪ್ರಕರಣವನ್ನು ಮುಕ್ತಾಯಗೊಳಿಸಬೇಕೆಂದು ಕೇಳಿಕೊಂಡಿದ್ದಾರೆ.

4. ದೂರುದಾರರು ತಮ್ಮ ಪ್ರತ್ಯುತ್ತರದಲ್ಲಿ ದೂರಿನ ಅಂಶಗಳನ್ನು ಪುನರುಚ್ಚರಿಸಿರುತ್ತಾರೆ.

5. ದೂರುದಾರರು ಸಲ್ಲಿಸಿದ ದೂರು ಆಕ್ಷೇಪಣೆ, ಪ್ರತ್ಯುತ್ತರ ಮತ್ತು ದಾಖಲೆಗಳನ್ನು ಪರಿಶೀಲಿಸಿದಾಗ, ಶ್ರೀಮತಿ ಕೆಂಪಮ್ಮ ಕೋಂ ವೆಂಕಟಯ್ಯನವರು ಈ ಕೆಳಗಿನಂತೆ ಜಮೀನು ಹೊಂದಿರುತ್ತಾರೆ.

| ಕ್ರಮ ಸಂಖ್ಯೆ | ಸರ್ವೆ ನಂ. ಮತ್ತು ಹಿಸ್ಸಾ ನಂ. | ವಿಸ್ತೀರ್ಣ |
|---|---|---|
| 1 | 33/ * /ಎ-ಪಿ1 | 1.00 |
| 2 | 33/ * /ಪಿ-ಪಿ1 | 2.00 |
| 3 | 44/ */3 | 1.24 |
| 4 | 47/*/1 | 2.10 |
| 5 | 62/*/2ಪಿ-ಪಿ3 | 1.12.08 |
| 6 | 69/ */2 | 0.09 |
| 7 | 78/ */3ಪಿ-ಪಿ2 | 0.05 |
| 8 | 84/*/12 | 0.01 |

6. ಶ್ರೀಮತಿ ಕೆಂಪಮ್ಮನವರು ಸಣ್ಣ ಹಿಡುವಳಿದಾರರೆಂದು ಸರ್ಕಾರದಿಂದ ಕೊಳವೆಬಾವಿ ಮಂಜೂರು ಮಾಡಿಸಿಕೊಂಡಿರುವ ಬಗ್ಗೆ ಗೌರವಾನ್ವಿತ ಉಪಲೋಕಾಯುಕ್ತರು 29.8.2013ರಂದು

ಜರುಗಿದ ಸಾರ್ವಜನಿಕ ಕ್ಯಾಂಪಿನಲ್ಲಿ ಈ ಬಗ್ಗೆ ಪರಿಶೀಲಿಸಿ ಸರ್ಕಾರದ ಹಣ ದುರುಪಯೋಗವಾಗಿದ್ದು ಕಂಡುಬಂದರೆ 1 ತಿಂಗಳೊಳಗೆ ಕ್ರಮಕೈಗೊಂಡು ವರದಿ ಸಲ್ಲಿಸುವಂತೆ ಎದುರುದಾರರಿಗೆ ಆದೇಶಿಸಿದ್ದರು. ಆದರೆ ಇದುವರೆಗೆ ಅವರು ವರದಿ ನೀಡಿರುವುದಿಲ್ಲ.

7. ಈ ಪ್ರಕರಣದಲ್ಲಿ ಲಭ್ಯವಿರುವ ದಾಖಲೆಗಳನ್ನು ಪರಿಶೀಲಿಸಲಾಗಿ ಕೆಂಪಮ್ಮ ಅವರು ಸರ್ವೆ ನಂ.78/3ಪಿ–ಪಿ,2 ಕ್ಷೇತ್ರ 5 ಗುಂಟೆ, ಸರ್ವೆ ನಂ.62/2 ಪಿ –3, ಕ್ಷೇತ್ರ 1.12 ಎಕರೆ ಹಾಗೂ ಸರ್ವೆ ನಂ.47/1 ರಲ್ಲಿ 2.10 ಎಕರೆ, ಒಟ್ಟು 3.27 ಎಕರೆ ಜಮೀನು ಹೊಂದಿರುವುದಾಗಿ ತಹಶೀಲ್ದಾರ್, ತುರುವೇಕೆರೆ ಇವರು ಪ್ರಮಾಣಪತ್ರ ನೀಡಿದ್ದು, ಆದ್ದರಿಂದ ಇವರು ಸಣ್ಣ ಹಿಡುವಳಿದಾರರ ಅಡಿಯಲ್ಲಿ ಬರುತ್ತಿದ್ದು, ಇವರಿಗೆ ಸರ್ಕಾರದಿಂದ ಕೊಳವೆಬಾವಿ ತೋಡಿಸಲು ಹಣ ಮಂಜೂರಾಗಿದೆಯೆಂದು ಎದುರುದಾರರು ತಿಳಿಸಿರುತ್ತಾರೆ.

8. ಆದರೆ ಮೇಲ್ಕಂಡ ಪಟ್ಟಿಯನ್ನು ಪರಿಶೀಲಿಸಿದಾಗ, ಶ್ರೀಮತಿ ಕೆಂಪಮ್ಮ ಅವರು $8^{1/2}$ ಎಕರೆ ಜಮೀನು ಹೊಂದಿದ್ದು, ದೊಡ್ಡಹಿಡುವಳಿದಾರರ ವ್ಯಾಪ್ತಿಯಲ್ಲಿ ಬರುತ್ತಾರೆ. ಇವರಿಗೆ ಗ್ರಾಮ ಲೆಕ್ಕಿಗರು ಭೂ ಹಿಡುವಳಿ ಪ್ರಮಾಣ ಪತ್ರ ನೀಡಿದ್ದು, ಆ ಪ್ರಕಾರ ಇವರು ಸಣ್ಣ ಹಿಡುವಳಿದಾರರಾಗುವುದಿಲ್ಲ. ಆದರೆ ತಹಶೀಲ್ದಾರ್, ಮತ್ತು ಎದುರುದಾರರು ಇದನ್ನು ಪರಿಶೀಲಿಸದೆ ಕೆಂಪಮ್ಮನವರನ್ನು ಸಣ್ಣ ಹಿಡುವಳಿದಾರರೆಂದು ಪರಿಗಣಿಸಿ ಅವರನ್ನು ಗಂಗಾಕಲ್ಯಾಣ ಯೋಜನೆಯ ಫಲಾನುಭವಿಯಾಗಿ ಆಯ್ಕೆ ಮಾಡಿರುತ್ತಾರೆ. ಸರ್ಕಾರದಿಂದ ರೂ.86,000/– ಹಣ ಮಂಜೂರಾಗಿದ್ದು, ಅದರಲ್ಲಿ ಬೋರ್‌ವೆಲ್, ವಿದ್ಯುತ್ ಸಂಪರ್ಕ,ಹಾಗೂ ಉಳಿದ ಮೊತ್ತಕ್ಕೆ ಸಾಮಗ್ರಿಗಳನ್ನು ಸಹ ನೀಡಲಾಗಿದೆಯೆಂದು ಎದುರುದಾರರು ತಿಳಿಸಿರುತ್ತಾರೆ. ಆದರೆ ಇದು 2006ನೇ ಸಾಲಿನ ಯೋಜನೆಯಾಗಿರುವುದರಿಂದ ಈ ಹಂತದಲ್ಲಿ ತಪ್ಪಿತಸ್ಥರ ವಿರುದ್ಧ ಕ್ರಮಕೈಗೊಳ್ಳಲು ಕಾಲಪರಿಮಿತಿ ಇರುವುದಿಲ್ಲ. ಆದರೆ ಕಾನೂನುಬಾಹಿರವಾಗಿ ಸಣ್ಣ ಹಿಡುವಳಿದಾರರೆಂದು ಗಂಗಾ ಕಲ್ಯಾಣ ಯೋಜನೆಯ ಫಲಾನುಭವಿಯಾದ ಕೆಂಪಮ್ಮ ಕೋಂ.ವೆಂಕಟಯ್ಯ ನವರಿಗೆ ಕೊಳವೆಬಾವಿ ಕೊರೆಸಲು ಮಂಜೂರಾದ ರೂ.86,000/–ಗಳು ಹಾಗೂ

ಹಣ ಮಂಜೂರಾದ ದಿನಾಂಕದಿಂದ ಹಣ ವಸೂಲಾಗುವವರೆಗೆ ಶೇ.6ರ ಬಡ್ಡಿದರದಲ್ಲಿ ವಸೂಲು ಮಾಡಿಕೊಂಡು ಸರ್ಕಾರಕ್ಕೆ ಭರಿಸುವುದು ಅವಶ್ಯವಾಗಿದೆ.

9. ಆದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(1)ರಡಿಯಲ್ಲಿ ಪ್ರದತ್ತವಾದ ಅಧಿಕಾರದಡಿಯಲ್ಲಿ, ತುರುವೇಕೆರೆ ತಾಲ್ಲೂಕು ಮಣಿಚೆಂಡೂರು ಗ್ರಾಮದ ಶ್ರೀಮತಿ ಕೆಂಪಮ್ಮ ಕೋಂ.ವೆಂಕಟಯ್ಯನರು ಗಂಗಾ ಕಲ್ಯಾಣ ಯೋಜನೆಯ ಫಲಾನುಭವಿಯಾಗಿದ್ದು ಅವರಿಗೆ ಕೊಳವೆಬಾವಿ ಕೊರೆಸಲು ಮಂಜೂರಾದ ರೂ.86,000/-ಗಳು ಹಾಗೂ ಹಣ ಮಂಜೂರಾದ ದಿನಾಂಕದಿಂದ ಹಣ ವಸೂಲಾಗುವವರೆಗೆ ಶೇ.6ರ ಬಡ್ಡಿದರದಲ್ಲಿ ವಸೂಲು ಮಾಡಿಕೊಂಡು ಸರ್ಕಾರಕ್ಕೆ ಭರಿಸಲು ಸೂಕ್ತ ಕ್ರಮಕೈಗೊಳ್ಳುವಂತೆ ಸಂಬಂಧಪಟ್ಟವರಿಗೆ ನಿರ್ದೇಶನ ನೀಡಲು ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

10. ಹಾಗೆಯೇ, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(2)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಒಂದು ತಿಂಗಳೊಳಗೆ ವರದಿ ಸಲ್ಲಿಸಲು ಕೋರಲಾಗಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

3/7/17

[ ನ್ಯಾಯಮೂರ್ತಿ ಸುಭಾಷ್ ಬಿ ಅಡಿ]
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ.